



# ಛದ್ಮವೇಷ

“ಸರ್ ನಾನು ಒಳಗಡೆ ಬರುವಷ್ಟರಲ್ಲಿಯೇ ಚೇತನ್ ಸರ್ ಅವರ ಬಾಡಿ ಟೇಬಲ್ ಮೇಲೆ ಬಿದ್ದಿತ್ತು. ಅವರ ತಲೆಯ ಹಿಂಬದಿಯಿಂದ ರಕ್ತ ಸುರಿಯುತ್ತಿತ್ತು... ಭಯವಾಗಿ ಕೂಗಿಕೊಂಡು ಕೆಳಕ್ಕೆ ಬಂದು, ಪೊಲೀಸರಿಗೆ ಫೋನ್ ಮಾಡಿದೆ.”

ಸುಮಾರು ಹದಿನೆಂಟರ ಯುವತಿ, ಮೊದಲ ಮಹಡಿಯ ಆಫೀಸಿನಲ್ಲಿ ದಾರುಣವಾಗಿ ಕೊಲೆಯಾಗಿ ಬಿದ್ದಿದ್ದ ಚೇತನ್‌ಕುಮಾರ್‌ನನ್ನು ನೋಡಿ ವಿಪರೀತ ಭಯಗೊಂಡಿದ್ದಾಳೆ. ಘಟನೆ ನೋಡಿ ಅರ್ಧಗಂಟೆ ಮೇಲಾದರೂ ಅವಳ ದೇಹ ಭಯದಿಂದ ನಡುಗುತ್ತಿತ್ತು. ಇಡೀ ದೇಹ ಬೆವರಿನಿಂದ ಒದ್ದೆಯಾಗಿತ್ತು. ಜೊತೆಗಿದ್ದ ಲೇಡಿ ಕಾನ್‌ಸ್ಟೆಬಲ್‌ಗೆ ಅವಳನ್ನು ಸಮಾಧಾನ ಪಡಿಸಲು ಹೇಳಿ,

“ನೀನು ಇಲ್ಲಿಗೆ ಯಾಕಮ್ಮ ಬಂದಿದ್ದು?” ಎಸಿಪಿ ನಾಗೇಶ್ ಪ್ರಶ್ನಿಸಿದ.

“ಚೇತನ್ ಸರ್ ಅವರ ಮುಂದಿನ ಪಿಚ್ಚರ್‌ಗೆ ಆಡಿಶನ್‌ಗಾಗಿ ಕರೆದಿದ್ದರು. ಆರು ಗಂಟೆಗೆ ಆಡಿಶನ್ ಅಂದಿದ್ದರು. ಅದಕ್ಕೇ ಬಂದಿದ್ದೆ.” ನಡುಗುವ ಧ್ವನಿಯಲ್ಲಿ ಹೇಳಿದಳು.

“ಇವರ ಹೇಳಿಕೆಯನ್ನು ತೆಗೆದುಕೊಳ್ಳಿ... ಹಾಗೆಯೇ ಇವರ ವಿವರಗಳನ್ನೂ ತೆಗೆದುಕೊಳ್ಳಿ.” ಎನ್ನುತ್ತಾ ಮೆಟ್ಟಿಲೇರತೊಡಗಿದ.